ಸದನದ ಕಲಾಪವು 11 ಗಂಟೆ 06 ನಿಮಿಷಕ್ಕೆ ಪ್ರಾರಂಭವಾಯಿತು

ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ:–

ವಿಷಯ: ವಿಶ್ವ ಹಿಂದೂ ಪರಿಷತ್ ಮುಖಂಡ ಪ್ರವೀಣ್ ತೊಗಾಡಿಯಾರವರಿಗೆ ಬೆಂಗಳೂರಿಗೆ ಬರುವುದಕ್ಕೆ ನಿರ್ಬಂಧ ವಿಧಿಸಿರುವ ಬಗ್ಗೆ.

(ಈ ಹಂತದಲ್ಲಿ ಬಿಜೆಪಿ ಸದಸ್ಯರುಗಳು ಸದನದ ಬಾವಿಯಲ್ಲಿ ನಿಂತು ಧರಣಿಯನ್ನು ಮುಂದುವರೆಸಿದರು)

ಶ್ರೀ ಎನ್.ಹೆಚ್. ಕೋನರೆಡ್ಡಿ:– ಮಾನ್ಯ ಅಧ್ಯಕ್ಷರೆ, ಅಧಿವೇಶನ ನಡೆಯುವುದಕ್ಕೆ ಬಿಡಿ, ದಿನಾ ಬರೀ ಇದೆ ಆಯಿತಲ್ಲ, ಇದೇನಿದು ವ್ಯವಸ್ಥೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ಸರ್ಕಾರ ಸುಮ್ಮನೆ ಮೊಂಡುತನ ಮಾಡುತ್ತಿದೆ. ಇವರು ವಿನಾಕಾರಣ ಸಮಸ್ಯೆಗಳನ್ನು ಮೈಮೇಲೆ ಹಾಕಿಕೊಳ್ಳುತ್ತಿದ್ದಾರೆ.

(ಈ ಹಂತದಲ್ಲಿ ಬಿಜೆಪಿ ಸದಸ್ಯರು ಬಾವಿಯಲ್ಲಿ ನಿಂತು ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗುತ್ತಿದ್ದರು)

ಶ್ರೀ ಜಗದೀಶ್ ಶೆಟ್ಟರ್:– ಇವರು ವಿನಾಕಾರಣ ಸಮಸ್ಯೆಗಳನ್ನು ಮೈಮೇಲೆ ಹಾಕಿಕೊಳ್ಳುತ್ತಿದ್ದಾರೆ. ಇವರ ಮೊಂಡುತನಕ್ಕೆ ವ್ಯವಸ್ಥೆ ಕೆಟ್ಟುಹೋಗುತ್ತಿದೆ. ಈಗಲಾದರೂ ಆ ನಿರ್ಬಂಧವನ್ನು ವಾಪಸ್ಸು ತೆಗೆದುಕೊಳ್ಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ಹೇಗೋ ಈ ಕೇಸ್ ಕೋರ್ಟ್‌ಗೆ ಹೋಗಿದೆ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್:– ಮಾನ್ಯ ಅಧ್ಯಕ್ಷರೆ, ಈಗ ಪ್ರಶ್ನೋತ್ತರ ವೇಳೆ ಇದೆ, ಪ್ರಶ್ನೋತ್ತರಕ್ಕೆ ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ಆರ್. ಅಶೋಕ್:– ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಗೃಹ ಸಚಿವರಿಗಾಗಲಿ ಬಂದು ಹೇಳುವಂತಹ ಸೌಜನ್ಯವೇ ಇಲ್ಲ.

(ಗೊಂದಲ)

ಅಧ್ಯಕ್ಷರು:– ನೋಡಿ, ಈಗ ಕಾರ್ಯಕಲಾಪವನ್ನು ನಡೆಸುವುದಕ್ಕೆ...

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ನಾವು ಸದನ ನಡೆಸುವುದಕ್ಕೆ ತಯಾರಿದ್ದೇವೆ.

ಅಧ್ಯಕ್ಷರು:– O.K. ನೋಡಿ ಜೀವರಾಜ್‌ರವರು ಬಂದರು.

ಶ್ರೀ ಆರ್. ನರೇಂದ್ರ:– ಮಾನ್ಯ ಅಧ್ಯಕ್ಷರೆ, ಕೋರ್ಟ್‌ಗೆ ಹೋಗಿ ಇಲ್ಲಿ ಬಂದು ಗಲಾಟೆ ಮಾಡಿದರೆ ಹೇಗೆ?

ಶ್ರೀ ದಿನೇಶ್ ಗುಂಡೂರಾವ್:– ಮಾನ್ಯ ಅಧ್ಯಕ್ಷರೆ, ಯಾರ್ಯಾರು ಬೇಕು ಎಲ್ಲಾ ಇದ್ದಾರೆ, ತಮ್ಮ ಎಲ್ಲಾ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಎಲ್ಲರೂ ಬಂದಿದ್ದಾರೆ.

ಅಧ್ಯಕ್ಷರು:– ಈಗ ಹತ್ತು ನಿಮಿಷಗಳ ಕಾಲ ಸದನವನ್ನು ಮುಂದೂಡಿ ಮತ್ತೆ ಪುನಃ ಸೇರುವುದು.

(ಸದನದ ಕಲಾಪವು 11 ಗಂಟೆ 07 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ 10 ನಿಮಿಷಗಳ ನಂತರ ಸೇರಲು ನಿಶ್ಚಯಿಸಿತು)

(ಸದನವು ಪುನಃ 11.20ಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷರು ಪೀಠವನ್ನಲಂಕರಿಸಿದ್ದರು)

(ಸದನ ಸಮಾವೇಶಗೊಂಡಾಗ ಭಾರತೀಯ ಜನತಾ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿಯಲ್ಲಿದ್ದರು ಹಾಗೂ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)

(ಗೊಂದಲ)

ಅಧ್ಯಕ್ಷರು:– ತಾವು ಏನು ಪ್ರತಿಭಟನೆ ಮಾಡಬೇಕೋ ಅದನ್ನು ಮಾಡಿ ತೋರಿಸಿದ್ದೀರಿ, ದಯವಿಟ್ಟು ಕಾರ್ಯಕಲಾಪಗಳಿಗೆ ಅವಕಾಶ ಮಾಡಿಕೊಡಿ. ನಾನು judgment ಕೊಡುವುದಕ್ಕೆ ಇಲ್ಲಿ ಕುಳಿತಿಲ್ಲ. ನಾನು ಅವರಿಗೆ ಹೇಳಲು ಬರುವುದಿಲ್ಲ. ಸರ್ಕಾರದ ತೀರ್ಮಾನದ ಬಗ್ಗೆ ನೀವು ಏನು protest ಮಾಡಬೇಕೋ, ಅದನ್ನು ಮಾಡಿ ತೋರಿಸಿದ್ದೀರಿ. ನಿನ್ನೆಯೂ ಮಾಡಿದ್ದೀರಿ, ಈಗಲೂ ಮಾಡಿದ್ದೀರಿ, ಅಷ್ಟು ಸಾಕು. It should not go beyond certain level.

(ಗೊಂದಲ)

ಶ್ರೀ ಆರ್. ಅಶೋಕ್ (ತಮ್ಮ ಸ್ಥಾನದಿಂದ):– ಸನ್ಮಾನ್ಯ ಅಧ್ಯಕ್ಷರೆ, ನಾವು ಕೇಳಿದ್ದು ಏನೆಂದರೆ, ಸರ್ಕಾರದವರು ಏಕೆ ban ಮಾಡುವುದಕ್ಕೆ ಹೋಗುತ್ತೀರಿ, ಕಾರ್ಯಕ್ರಮ ನಡೆಯುತ್ತಿದೆ, ಅವರು ಬಂದು ಹೋಗುತ್ತಾರೆ, ನೀವಾಗಿ ನೀವು ಏಕೆ ಮೈಮೇಲೆ ಎಳೆದುಕೊಳ್ಳುತ್ತೀರಿ? ಎಲ್ಲ ಸಂಘಟನೆಗಳೂ ಕಾರ್ಯಕ್ರಮಗಳನ್ನು ಮಾಡುತ್ತಿವೆ. ಬೇರೆ ಬೇರೆಯವರಿಗೆ ಅನುಮತಿ ಕೊಟ್ಟಿದ್ದಾರೆ. ಕೊಡಬೇಡಿ ಎಂದು ನಾವು ಹೇಳುವುದಿಲ್ಲ. ಕಾನೂನು ಪ್ರಕಾರ ಏನು ಮಾಡಬೇಕೋ ಅದನ್ನು ನೀವು ಮಾಡಿ. ಇದರಲ್ಲಿ ಸರ್ಕಾರದ್ದು ಏನೂ ಪಾತ್ರವಿಲ್ಲ, ಪೊಲೀಸಿನವರೇ ಮಾಡಿದ್ದಾರೆ ಎಂದು ಇಲ್ಲಿ ಗೃಹ ಸಚಿವರು ಹೇಳಿಕೆ ಕೊಟ್ಟಿದ್ದಾರೆ. ಪೊಲೀಸಿನವರಿಗೆ influence ಮಾಡಿದವರು ಯಾರು? ಇವರೇ ಅಲ್ಲವೇ? ಈಗಾಗಲೇ ಕೇಂದ್ರದಲ್ಲಿ ಆಂಟನಿಯವರು ರಿಪೋರ್ಟ್ ಕೊಟ್ಟಿದ್ದಾರೆ, ನೀವು ಹಿಂದೂಗಳ ವಿರೋಧ ಮಾಡಿಕೊಂಡಿದ್ದು ಇಡೀ ದೇಶದಲ್ಲಿ ಇವತ್ತು ಅವರ್ಯಾರು ಕಾಂಗ್ರೆಸ್ಸಿಗೆ ಓಟು ಹಾಕದ ಹಾಗೆ ಮಾಡಿದ್ದೀರಿ ಎಂದು ಅವರು ರಿಪೋರ್ಟ್ ಕೊಟ್ಟಿದ್ದಾರೆ. ಇಲ್ಲಿಯೂ ಇವತ್ತು ಈ ರೀತಿ ಕಾರ್ಯಕ್ರಮ ಮಾಡುವುದಕ್ಕೆ ತೊಂದರೆ ಮಾಡುವುದರಿಂದ ಇಲ್ಲೂ ಕಾಂಗ್ರೆಸ್ ಮುಕ್ತ ಕರ್ನಾಟಕವಾಗುವುದಕ್ಕೆ ಒಂದು ರೀತಿ ಇವರೇ ದಾರಿ ಮಾಡಿಕೊಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಸದಸ್ಯರಿಗೆ ನಾನು ವಿನಂತಿ ಮಾಡುವುದೇನೆಂದರೆ ಇಲ್ಲಿ ರಾಜಕೀಯವಾದ ಚರ್ಚೆ ಬೇಡ. ದಯವಿಟ್ಟು ಈ ಸದನದಲ್ಲಿ ರಾಜಕೀಯ ಚರ್ಚೆ ಬೇಡ. ಅವರು ಮಾಡಿರುವ ತೀರ್ಮಾನಕ್ಕೆ ನಿಮ್ಮ ಪ್ರತಿಭಟನೆಯನ್ನು ತೋರಿಸಿದ್ದೀರಿ, ಸಾಕು.

(ಗೊಂದಲ)

ಶ್ರೀ ಆರ್. ಅಶೋಕ್:– ಪುತ್ತೂರು ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷರು ಹಿಂದೂ ಸಮಾವೇಶಕ್ಕೆ ಹೋದರು ಎಂದು ಅವರನ್ನು ಪಾರ್ಟಿಯಿಂದಲೇ ವಜಾ ಮಾಡಿಬಿಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆಯಲಾಗಿದೆ ಮುಂತಾದ ವಿಚಾರಗಳೆಲ್ಲ ನಮಗೆ ಬೇಡ. ಅವುಗಳನ್ನೆಲ್ಲಾ record ಮಾಡುವುದಕ್ಕೆ ಹೋಗಬೇಡಿ.

(ಗೊಂದಲ)

ಶ್ರೀ ಆರ್. ಅಶೋಕ್:– ಮುಸ್ಲಿಮರನ್ನು ಓಲೈಕೆ ಮಾಡಲು ಈ ರೀತಿ ಮಾಡುತ್ತಿದ್ದಾರೆ.

(ಗೊಂದಲ)

(ಸದನದ ಬಾವಿಯಲ್ಲಿದ್ದ ಸದಸ್ಯರು ಮತ್ತು ಆಡಳಿತ ಪಕ್ಷದ ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡುತ್ತಿದ್ದರು)

ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದತೆಗೆಯಲಾಗಿದೆ ಹಾಗೇ ಆಗುತ್ತಿದೆ.

ಅಧ್ಯಕ್ಷರು:– ಒಂದು ನಿಮಿಷ, ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಸನ್ಮಾನ್ಯ ಅಧ್ಯಕ್ಷರೆ, ನಾನು ಹೇಳುವುದೇನೆಂದರೆ, ...

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಅಧ್ಯಕ್ಷರೆ, ಈ ಸದನ ರಾಜಕೀಯಕ್ಕೆ ಬಳಕೆಯಾಗುವುದು ಬೇಡ. ನಿನ್ನೆಯಿಂದ ಈ ಸದನವನ್ನು ರಾಜಕೀಯ ಲಾಭಕ್ಕೆ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಸದನವನ್ನು ರಾಜಕೀಯದ ಓಟ್ ಬ್ಯಾಂಕ್ ಮಾಡಿಕೊಂಡಿದ್ದಾರೆ. ರಾಜ್ಯದ ಆರು ಕೋಟಿ ಜನರ ಸಮಸ್ಯೆಗಳು ಇಲ್ಲಿ ಚರ್ಚೆಯಾಗಬೇಕು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ತಾವು ಕೊಡುವ ಸಲಹೆಯನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಈ ಸರ್ಕಾರ ಎಲ್ಲ ವಿಷಯಕ್ಕೂ ಬಹಳ ಮೊಂಡತನ ಮಾಡುತ್ತಿದೆ, ಒಂದು ಪ್ರತಿಷ್ಠೆಯನ್ನಾಗಿ ಮಾಡಿಕೊಳ್ಳುತ್ತದೆ. ಇಂಥ ಸೂಕ್ಷ್ಮ ವಿಚಾರದ ಬಗ್ಗೆ ಸರಿಯಾಗಿ ವರ್ತಿಸುತ್ತಿಲ್ಲ. ನಿಜವಾಗಿ ಕಾನೂನು ಸುವ್ಯವಸ್ಥೆಯ ವಿಚಾರವಿದ್ದರೆ, ಕಾನೂನು ಸುವ್ಯವಸ್ಥೆಯನ್ನು ಕಾಪಾಡುವುದು ಸರ್ಕಾರದ ಕರ್ತವ್ಯ. ಆದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಎಲ್ಲರಿಗೂ ಮಾತನಾಡಲು, ಭಾಷಣ ಮಾಡಲು, ತಮ್ಮ ವಿಚಾರ ತಿಳಿಸಲು ಎಲ್ಲ ರೀತಿಯ ಹಕ್ಕು ಇದೆ. ಇಲ್ಲಿಯವರೆಗೆ ಇಡೀ ರಾಜ್ಯದಲ್ಲಿ ಶಾಂತ ರೀತಿಯಲ್ಲಿ ಕಾರ್ಯಕ್ರಮಗಳು ನಡೆದಿವೆ. ರಾಜ್ಯದಲ್ಲಿ ಈಗಾಗಲೇ ಬಹಳಷ್ಟು ಕಡೆಗಳಲ್ಲಿ ವಿಶ್ವ ಹಿಂದೂ ಪರಿಷತ್ ಕಾರ್ಯಕ್ರಮಗಳು ನಡೆದಿವೆ. ತೊಗಾಡಿಯಾರವರು ಬಹಳ ಕಡೆಗೆ ಹೋಗಿ ಬಂದಿದ್ದಾರೆ. ಇಷ್ಟೆಲ್ಲ ಇದ್ದಾಗಲೂ ಸರ್ಕಾರ ಅವರು ಇಲ್ಲಿಗೆ ಬರುವುದಕ್ಕೆ ban ಅನ್ನು ಹೇರಿ ಬಹಳ ದೊಡ್ಡ ತಪ್ಪು ಮಾಡಿದ್ದಾರೆ. ಇದನ್ನು ನಾವು ಖಂಡಿಸುತ್ತಿದ್ದೇವೆ. ಈ ಬಗ್ಗೆ